**ದಿನಾಂಕಃ 17.11.2025 ರಂದು ಪಿಡಬ್ಲೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ಶ್ರೀ.ಪಿ ಬಿ ಜಿ ವಕೀಲರಿಂದಃ-

1. ನಾನು ಜಮಖಂಡಿ ಪಟ್ಟಣದ ಮೂಲ ನಿವಾಸಿಯಾಗಿರುತ್ತೇನೆ. ನಾನು ಪದವೀಧರೆಯಾಗಿರುತ್ತೇನೆ. ನನ್ನ ಫಿರ್ಯಾದನ್ನು ಮತ್ತು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಿದ್ಧಪಡಿಸಲು ನಾನೇ ಮಾಹಿತಿ ನೀಡಿರುತ್ತೇನೆ. ನಾನು ಗೃಹಿಣಿಯಾಗಿರುತ್ತೇನೆ. ಈ ಮೊದಲು ಟೀಚರ್ ಎಂದು ಕೆಲಸ ಮಾಡುತ್ತಿದ್ದೆ. ನಾನು ಟೀಚರ್ ಎಂದು ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಹಣ ಲೇವಾದೇವಿ ವ್ಯವಹಾರ ಮಾಡುವ ಲೈಸನ್ಸ ಹೊಂದಿರುವುದಿಲ್ಲ.

2. ನಾನು ಆದಾಯ ತೆರಿಗೆ ಪಾವತಿದಾರಳಾಗಿರುವುದಿಲ್ಲ. ನಾನು ಶಿಕ್ಷಕಿಯಾಗಿದ್ದಾಗ ಹಣವನ್ನು ಉಳಿಸಿ ಇಟ್ಟುಕೊಂಡಿದ್ದೆ. ಸದರಿ ಅವಧಿಯಲ್ಲಿ ಹಣ ಉಳಿಸಿರುತ್ತೇನೆ ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲ. ನಾನು ಮತ್ತು ಆರೋಪಿ ಶಿಕ್ಷಕಿಯರಾಗಿ ಕೆಲಸ ಮಾಡಿರುವುದರಿಂದ ಅವರ ಪರಿಚಯವಿದೆ. ಅವರು ಕಳೆದ 10-15 ವರ್ಷಗಳಿಂದ ಪರಿಚಯವಿರುತ್ತಾರೆ. ಆರೋಪಿಯು ತನ್ನ ಮಗ ಇಂಜನೀಯರಿಂಗ್ ಓದುತ್ತಿದ್ದಾನೆ ಮತ್ತು ತನಗೆ ಕಷ್ಟವಿದೆ ಎಂದು ಹೇಳಿದ್ದರಿಂದ, ನಾನು ಅವರಿಗೆ ರೂ.7,00,000/- ಹಣ ಕೊಟ್ಟಿರುತ್ತೇನೆ. ನಾನು ಸದರಿ ಹಣವನ್ನು 2018-19 ರಲ್ಲಿ ಆರೋಪಿಗೆ ಕೊಟ್ಟಿರುತ್ತೇನೆ. ನಾನು ಹಣ ನೀಡಿದ ದಿನಾಂಕ ನಿಖರವಾಗಿ ನೆನಪಿಲ್ಲ. ಸದರಿ ರೂ.7,00,000/- ಹಣವನ್ನು ನನ್ನ ಗಳಿಕೆಯಲ್ಲಿ ಉಳಿಸಿ ಇಟ್ಟುಕೊಂಡಿದ್ದೆ. ನಾನು ಆರೋಪಿಗೆ ಹಣ ನೀಡಿದ ನಿಖರವಾದ ದಿನಾಂಕವನ್ನು ನನ್ನ ಫಿರ್ಯಾದನಲ್ಲಿ ಮತ್ತು ಲೀಗಲ್ ನೋಟೀಸಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ನಾನು ಆರೋಪಿಗೆ ನೀಡಿರುವ ಹಣ ನೋಟುಗಳು 500 ರೂ. ಮುಖಬೆಲೆಯ ನೋಟುಗಳಾಗಿದ್ದವು. ಅವುಗಳು ಎಷ್ಟು ನೋಟುಗಳು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ನನ್ನ ತಂದೆ-ತಾಯಿ ಸಮಕ್ಷಮ ಸದರಿ ಮೊತ್ತದ ಹಣವನ್ನು ಆರೋಪಿಗೆ ನೀಡಿರುತ್ತೇನೆ. ನನ್ನ ತಂದೆ-ತಾಯಿ ಸಮಕ್ಷಮ ಹಣ ನೀಡಿರುತ್ತೇನೆ ಎಂದು ನನ್ನ ಫಿರ್ಯಾದನಲ್ಲಿ ಬರೆಸಿಲ್ಲ ಎಂದರೆ ಸರಿ.

3. ನಾನು ಆರೋಪಿಗೆ ಒಂದು ಬಾರಿ ರೂ.3,00,000/-, ನಂತರ ರೂ.2,00,000/-, ತದನಂತರ ರೂ.2,00,000/- ಹಣ ನೀಡಿರುತ್ತೇನೆ. ಈ ರೀತಿಯಾಗಿ ನನ್ನ ಫಿರ್ಯಾದಿನಲ್ಲಿ ಬರೆಸಿಲ್ಲ. ಆರೋಪಿಯು ಸರಕಾರಿ ನೌಕರಳಾಗಿದ್ದು, ಅವರಿಗೆ ಮಾಸಿಕ ಸಂಬಳ ರೂ.90,000/- ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಸರಕಾರಿ ನೌಕರಳಾಗಿದ್ದರಿಂದ, ಆಕೆಗೆ ಖಾಸಗಿ ವ್ಯಕ್ತಿಗಳಿಂದ ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ತನ್ನ ಮಗನ ವಿದ್ಯಾಭ್ಯಾಸಕ್ಕಾಗಿ ಮತ್ತು ತನ್ನ ಪ್ರಾಪಂಚಿಕ ಅಡಚಣೆಗಾಗಿ ನನ್ನಿಂದ ಸಾಲ ಪಡೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಯಾವತ್ತಿಗೂ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ದಿನಾಂಕ 03.02.2023 ರಂದು ಆರೋಪಿಯು ನನಗೆ ಚೆಕ್ ನೀಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 04.03.2023 ರಂದು ನಾನು ಆರೋಪಿಗೆ ಖೊಟ್ಟಿಯಾಗಿ ಲೀಗಲ್ ನೋಟೀಸ್ ನೀಡಿರುತ್ತೇನೆ ಎಂದರೆ ಸರಿಯಲ್ಲ.

4. ಆರೋಪಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ ಎಂದರೆ ಸರಿ. ಆರೋಪಿಯ ಇಬ್ಬರು ಮಕ್ಕಳು ಪ್ರತಿ ತಿಂಗಳು ರೂ.50,000/- ದಿಂದ ರೂ.60,000/- ಗಳಿಸುತ್ತಾರೆ ಎಂದರೆ ಸಾಕ್ಷಿಯು ಆರೋಪಿಯು ಸಾಲ ಪಡೆಯುವಾಗ ಅವರು ಚಿಕ್ಕವರಾಗಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಆರೋಪಿಯ ಮಕ್ಕಳು ಚಿಕ್ಕವರಾಗಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಆಗ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನೀವು, ಮಂಜುಳಾ ಯರಗೊಪ್ಪ, ಕವಿತಾ ರಾಮದುರ್ಗ, ಮಹಾದೇವಿ ರಾಮದುರ್ಗ, ಲಕ್ಷ್ಮೀ ಖರೆ ಮತ್ತು ರಾಜೇಶ್ವರಿ ಬಿಜ್ಜರಗಿ ಎಲ್ಲರೂ ಒಂದೇ ಓಣಿಯಲ್ಲಿ ವಾಸ ಮಾಡುತ್ತೀರಿ ಎಂದು ವಕೀಲರು ಸೂಚಿಸಿದಾಗ, ಸಾಕ್ಷಿಯು ಇಲ್ಲಾ ಎಂದು ನುಡಿಯುತ್ತಾರೆ. ನಾನು ಮತ್ತು ಈ ಮೇಲೆ ಹೇಳಿದ ಎಲ್ಲರೂ ಸೇರಿ ಬಿ.ಸಿ. ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ.

5. ನಾನು ಮತ್ತು ಇತರೆ ನನ್ನ ಎಲ್ಲಾ ಗೆಳತಿಯರು ಸೇರಿ ಬಿ.ಸಿ. ವ್ಯವಹಾರ ಮಾಡುತ್ತಿದ್ದು, ಎಲ್ಲಾ ಸದಸ್ಯರ ಹತ್ತಿರ ಪ್ರತಿ ತಿಂಗಳು ರೂ.5,000/- ಹಣ ಪಡೆದು ಸಂಗ್ರಹಿಸುತ್ತಿದ್ದೆವು ಎಂದರೆ ಸರಿಯಲ್ಲ. ಎಲ್ಲಾ ಸದಸ್ಯರ ಹಣ ಒಟ್ಟಾರೆಯಾಗಿ ರೂ.5,00,000/- ಆಗುತ್ತಿತ್ತು ಎಂದರೆ ಸರಿಯಲ್ಲ. ಸದರಿ ಬಿ.ಸಿ. ಯಲ್ಲಿ ಯಾರು ಹರಾಜಿನಲ್ಲಿ ಹೆಚ್ಚಿಗೆ ಘೋಷಣೆ ಕೂಗುತ್ತಾರೋ ಅವರಿಗೆ ಸದರಿ ಹಣವನ್ನು ಪ್ರತಿ ತಿಂಗಳು ನೀಡಲಾಗುತ್ತಿತ್ತು ಎಂದರೆ ಸರಿಯಲ್ಲ. ಹರಾಜಿನ ನಂತರ

ಉಳಿದ ಹಣವನ್ನು ಎಲ್ಲಾ ಸದಸ್ಯರಿಗೆ ಸಮವಾಗಿ ಹಂಚಿಕೊಡಲಾಗುತ್ತಿತ್ತು ಎಂದರೆ ಸಾಕ್ಷಿಯು ಈ ವಿಷಯ ನನಗೆ ಗೊತ್ತೇ ಇಲ್ಲ ಎಂದು ನುಡಿಯುತ್ತಾರೆ. ಹರಾಜಿನ ನಂತರ ಪ್ರತಿ ಸದಸ್ಯರಿಂದ ತಲಾ 10 ಚೆಕ್ಕುಗಳನ್ನು ಪಡೆದುಕೊಳ್ಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ 10 ಚೆಕ್ಕುಗಳನ್ನು ಬಿ.ಸಿ. ಮುಗಿದ ನಂತರ ಮರಳಿ ಕೊಡುವ ಕರಾರಿನ ಮೇಲೆ ತೆಗೆದುಕೊಂಡಿದ್ದೆ ಎಂದರೆ ಸರಿಯಲ್ಲ. ಕಮೀಷನ್ ಹಣವನ್ನು ಹಂಚಿಕೊಳ್ಳುವಾಗ ನನ್ನ ಮತ್ತು ಆರೋಪಿಯ ಮಧ್ಯ ಜಗಳವಾಗಿತ್ತು ಎಂದರೆ ಸರಿಯಲ್ಲ. ಬಿ.ಸಿ. ವ್ಯವಹಾರ ಮುಗಿದ ನಂತರ ಆರೋಪಿಯು ತಾನು ನೀಡಿದ ಚೆಕ್ಕುಗಳನ್ನು ಮರಳಿ ಕೊಡುವಂತೆ ನನಗೆ ಕೇಳಿದ್ದು, ನಾನು ಅವುಗಳು ಕಳೆದು ಹೋಗಿವೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಚೆಕ್ಕುಗಳು ಕಳೆದು ಹೋಗಿವೆ ಎಂದು ಬರೆದುಕೊಡುವಂತೆ ಆರೋಪಿಯು ನಿಮಗೆ ಕೇಳಿಕೊಂಡರೂ ಸಹಿತ, ನೀವು ಬರೆದುಕೊಟ್ಟಿಲ್ಲ ಎಂದು ವಕೀಲರು ಸೂಚಿಸಿದಾಗ, ಸಾಕ್ಷಿಯು ಅದೆಲ್ಲಾ ಸುಳ್ಳು ಎಂದು ನುಡಿಯುತ್ತಾರೆ. ದಿನಾಂಕ 03.02.2023 ರಂದು ಆರೋಪಿಯ ಚೆಕ್ ಮೇಲೆ ನಾನೇ ಹಣ ನಮೂದಿಸಿ ಬ್ಯಾಂಕಿಗೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಚೆಕ್ಕನ್ನು ಆರೋಪಿಯೇ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಭದ್ರತೆಗಾಗಿ ನೀಡಿದ 10 ಚೆಕ್ಕುಗಳ ಪೈಕಿ ಒಂದು ಚೆಕ್ಕಿನ ಕುರಿತಾಗಿ ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

6. ಆರೋಪಿಯ ಖಾತೆಗೆ ಸಂಬಂಧಿಸಿದ ಇನ್ನೂ 4 ಚೆಕ್ಕುಗಳು ನನ್ನ ಹಾಗೂ ನನ್ನ ಗೆಳತಿಯರ ಬಳಿ ಇರುತ್ತವೆ ಎಂದರೆ ಸರಿಯಲ್ಲ. ಆರೋಪಿಯು ಭದ್ರತೆಗಾಗಿ ನೀಡಿದ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ನಾನು ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂರದೆ ಸರಿಯಲ್ಲ. ಆರೋಪಿಯು ನನ್ನೊಂದಿಗೆ ಯಾವುದೇ ವ್ಯವಹಾರ ಮಾಡಿಲ್ಲ ಮತ್ತು ನನಗೆ ಯಾವುದೇ ದುಡ್ಡು ಕೊಡವುದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಬಿಪಿಎಲ್ ರೇಶನ್ ಕಾರ್ಡ ಹೊಂದಿರುತ್ತೇನೆ. ನಾನು ಆರೋಪಿಗೆ ರೂ.7,00,000/- ಹಣ ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನೊಂದಿಗೆ ಬಿ.ಸಿ. ವ್ಯವಹಾರ ಮಾಡಿರುವುದರಿಂದ, ನಾನು ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ಫಿರ್ಯಾದನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR Digitally signed by RAJASHEKHAR Date: 2025.11.18 10:28:55 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.